

# ಬಾಲಿಯಲ್ಲಿ ಜಾಲಿ ಬರ್ಡ್ಸ್!



ಇಂಡೋನೇಷ್ಯಾ, ಜೀವ ವೈವಿಧ್ಯತೆಯ ತವರು. ಅಲ್ಲಿ ಅದ್ಭುತವೆನಿಸುವಂತಹ ಪಕ್ಷಿ ಪ್ರಭೇದಗಳಿವೆ. ಆದರಲ್ಲಿ ಕೆಲವಂತೂ ಆ ನಾಡಿಗೇ ಸೀಮಿತ ಎನ್ನಬಹುದು.

★ ಚಿತ್ರ- ಲೇಖನ: ಸುಚೇತಾ ಕೆ.ಎನ್.

ಇಂಡೋನೇಷ್ಯಾ ದೇಶದ ಪುಟ್ಟ ದ್ವೀಪವಾದ ಬಾಲಿಗೆ ಪ್ರವಾಸ ಹೋಗಿದ್ದೆವು. ಅಲ್ಲಿಯವರೆಗೂ ಹೋದ ಬಳಿಕ ಆ ನಾಡಿನ ಪಕ್ಷಿಗಳನ್ನು ನೋಡಿ ಬರದಿದ್ದರೆ ಹೇಗೆ? ಹೇಳಿ ಕೇಳಿ ಇಂಡೊನೇಷ್ಯಾ ಜೀವ ವೈವಿಧ್ಯದ ತವರು. ಅದರಲ್ಲೂ ಅದ್ಭುತವೆನ್ನಿಸುವ ಪಕ್ಷಿಪ್ರಭೇಗಳಿವೆ. ಪಟ್ಟಣದ ಬೀದಿಗಳಲ್ಲಿ ಅಡ್ಡಾಡುವಾಗ ಎಷ್ಟು ಹಕ್ಕಿಗಳು ಕಂಡಾವು? ನಮ್ಮದು  ಒಟ್ಟು ಹತ್ತು ದಿನಗಳ ಪ್ರವಾಸ. ಇಷ್ಟು ದಿನಗಳೊಳಗೇ ಸಾಧ್ಯವಾದಷ್ಟು ಹೆಚ್ಚು ಸ್ಥಳಗಳನ್ನು ನೋಡಬೇಕೆಂಬ ಹಂಬಲ. ಹಾಗೆಂದು ಅಲ್ಲಿನ ಬರ್ಡ್ ಪಾರ್ಕ್ ಬಿಡುವ ಹಾಗಿರಲಿಲ್ಲ.

'ಬಾಲಿ ಬರ್ಡ್ ಪಾರ್ಕ್' ಎಂದು ಇಂಗ್ಲಿಷಿನಲ್ಲಿ ಬರೆದಿದ್ದ ದ್ವಾರದ ಬಳಿ ನಮ್ಮ ಟ್ಯಾಕ್ಸಿ ನಿಂತಿತು. ಹಕ್ಕಿಗಳ ಕಿಚಿಪಿಚಿ ಹೊರಗಡೆ ನಿಂತವರಿಗೆ ಸ್ಪಷ್ಟವಾಗಿ ಕೇಳಿಸುತಿತ್ತು. ನನಗಂತೂ ಯಾವಾಗ ಒಳಗೆ ಹೋಗುತ್ತೇನೋ ಎಂಬ ಚಡಪಡಿಕೆ. ಗೇಟು ದಾಟುತ್ತಿದ್ದಂತೆ ಪಕ್ಕದಲ್ಲೇ ಟಿಕೆಟ್ ಕೌಂಟರ್. ಪ್ರವೇಶ ವೆಚ್ಚ ಬಹಳ ದುಬಾರಿ ಎನಿಸಿದರೂ ನಿರ್ವಾಹವಿರಲಿಲ್ಲ.

ಓಹ್.! ಒಳಗೆ ಅದೆಷ್ಟು ಕಲರವ, ಅದೆಷ್ಟು ಬಣ್ಣಗಳ ಜಾತ್ರೆ! ಅದೆಷ್ಟು ಜಾತಿಯ ಹಕ್ಕಿಗಳು! ದೊಡ್ಡ ಗಾತ್ರದ ವರ್ಣರಂಜಿತ ಗಿಳಿಗಳು ನಮ್ಮನ್ನು ಸ್ವಾಗತಿಸಲು ನಿಂತಂತೆ ಮೊದಲಿಗೇ ಎದುರಾದವು. ಕೀ..ಪೀ ಎಂದು ಅತ್ತಿಂದಿತ್ತ ಹಾರುತ್ತಿದ್ದ ಅವುಗಳನ್ನು ನೋಡುತ್ತಿದ್ದರೆ ಬಣ್ಣಗಳಿಗೆಲ್ಲಾ ರೆಕ್ಕೆ ಬಂದು ಆಗಸದಲ್ಲಿ ಹೋಳಿಯಾಡುತ್ತಿದ್ದಂತೆ ಭಾಸವಾಗುತ್ತಿತ್ತು. ಪೂರ್ತಿ ನೇರಳೆ ಬಣ್ಣದ, ಕಣ್ಣಿನ ಸುತ್ತಲೂ ಹಳದಿ ಉಂಗುರವಿರುವ ಗಿಳಿ, ಹಸಿರು, ಕೆಂಪು, ಹಳದಿ– ಹೀಗೆ ನಾನಾ ವರ್ಣದ ಶುಕಸಮೂಹವೇ ನೆರೆದಿತ್ತು ಅಲ್ಲಿ. ಇವುಗಳ ತಾರಕ ಸ್ವರದ ಮಧ್ಯೆಯೂ ಮೈನಾ ಹಕ್ಕಿಯ  ಇಂಚರ ಕೇಳುತ್ತಿತ್ತು.

ಅಲ್ಲಿನ ಮ್ಯಾಪ್ ಹಿಡಿದು ನಿಧಾನವಾಗಿ ಒಂದೊಂದನ್ನೇ ನೋಡುತ್ತಾ ನಡೆದೆವು. ಬಾತುಕೋಳಿಗಳು, ಪೆಲಿಕನ್ ಗಳು  ಕೊಳದಲ್ಲಿ ನೀರಾಟವಾಡುತ್ತಿದ್ದವು. ಹಂಸವೊಂದು ತನ್ನ ಪಾಡಿಗೆ ತಾನೆಂಬಂತೆ ನಿಧಾನವಾಗಿ ಈಜುತ್ತಿತ್ತು. ಕೃತಕವಾಗಿ ಸೃಷ್ಟಿಸಿದ ಜಲಪಾತದಡಿಯಲ್ಲಿ ನಿಂತು ಗ್ರೇ ಹೆರಾನ್ ಸ್ನಾನ ಮಾಡುತ್ತಿತ್ತು.